ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ಪಿಂಚಣಿದಾರರ (ವೈದ್ಯಕೀಯ ಹಾಜರಾತಿ) ನಿಯಮ–1969ರ ಪ್ರಕಾರ ರಾಜ್ಯ ಸರ್ಕಾರದ ನಿವೃತ್ತಿದಾರರು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಆ) ಮೇಲಿನಂತೆ.

ಇ) ಮೇಲಿನಂತೆ.

ಈ) 5ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ನಿವೃತ್ತರಿಗೆ ಕನಿಷ್ಟ ನಿವೃತ್ತಿ ವೇತನ ಮತ್ತು ಕನಿಷ್ಟ ಕುಟುಂಬ ನಿವೃತ್ತಿ ವೇತನವನ್ನು ರೂ. 2,250ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ. ಹಾಗೂ ದಿನಾಂಕ: 01.04.2006 ರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮದ ಅನುಸಾರ ಜಾರಿಯಲ್ಲಿದ್ದ ಹಳೆಯ ಪಿಂಚಣಿ ವ್ಯವಸ್ಥೆ ರದ್ದುಪಡಿಸಿ ಹೊಸ ವಂತಿಗೆ ಪಿಂಚಣಿ ಯೋಜನೆಯನ್ನು ದಿನಾಂಕ: 1–4–2006 ರಿಂದ ಹೊಸದಾಗಿ ಸರ್ಕಾರಿ ಸೇವೆಗೆ ಸೇರುವ ನೌಕರರಿಗೆ ಜಾರಿಗೆ ತರಲಾಗಿದೆ.

332 ಶ್ರೀ ರಾಜು. ಕೆ (ರಾಮನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರದಲ್ಲಿ ಜಿಲ್ಲಾ ಸಂಕೀರ್ಣ, ಕಂದಾಯ ಭವನ, ಪೊಲೀಸ್ ಭವನ ಮತ್ತು ಪಂಚಾಯತ್ ಭವನಗಳನ್ನು ನಿರ್ಮಿಸಲು ಸರ್ಕಾರ ನಿಗದಿಪಡಿಸಿರುವ ಅಂದಾಜು ಮೊತ್ತ ಎಷ್ಟು;

ಆ) ಸದರಿ ಭವನಗಳನ್ನು ನಿರ್ಮಿಸಲು ಸರ್ಕಾರ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು;

ಇ) ಸದರಿ ಭವನಗಳನ್ನು ನಿರ್ಮಿಸಲು ಸುಮಾರು ಅಂದಾಜು ಇನ್ನೂ 20.00 ಕೋಟಿ ರೂಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಮೇಲ್ಕಂಡ ಭವನಗಳ ನಿರ್ಮಾಣಕ್ಕೆ ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡುವುದೇ;

ಉ) ಮೇಲ್ಕಂಡ ಭವನಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ;

ಊ) ಹಾಗಿದ್ದಲ್ಲಿ, ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಮನಗರದಲ್ಲಿ ಜಿಲ್ಲಾ ಸಂಕೀರ್ಣ ಕಟ್ಟಡದ ಅಂದಾಜಿಗೆ ರೂ.3,000.00 ಲಕ್ಷಗಳು ಹಾಗೂ ಕಂದಾಯ ಭವನ, ಪೋಲಿಸ್ ಭವನ ಮತ್ತು ಪಂಚಾಯತ್ ಭವನಗಳ ಕಟ್ಟಡಗಳ ಅಂದಾಜುಗಳಿಗೆ ರೂ.3,300.00 ಲಕ್ಷಗಳು.

ಆ) ಸದರಿ ಭವನಗಳಿಗೆ ನಿರ್ಮಿಸಲು ಇಲ್ಲಿಯವರೆಗೆ ರೂ.4,695.89 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) ಗುತ್ತಿಗೆ ಕರಾರಿನಂತೆ ಒಟ್ಟು ರೂ.71.17 ಕೋಟಿಗಳ ಅವಶ್ಯಕತೆ ಇದ್ದು, ಅಂದಾಜು ಮೊತ್ತಕ್ಕೆ ಹೋಲಿಸಿದ್ದಲ್ಲಿ ರೂ.8.17 ಕೋಟಿಗಳ ಹೆಚ್ಚುವರಿ ಅನುದಾನ ಬೇಕಿರುತ್ತದೆ.

ಈ) ಪ್ರಗತಿ ಆಧರಿಸಿ ಅನುದಾನ ಬಿಡುಗಡೆಗೊಳಿಸಲಾಗುವುದು.

ಉ) ಹೌದು.

ಊ) ಗುತ್ತಿಗೆ ಕರಾರಿನಂತೆ ಜಿಲ್ಲಾ ಸಂಕೀರ್ಣ ಕಟ್ಟಡವನ್ನು ದಿನಾಂಕ: 30.07.2008ಕ್ಕೆ ಹಾಗೂ ಕಂದಾಯ ಭವನ, ಪೋಲೀಸ್ ಭವನ ಮತ್ತು ಪಂಚಾಯತ್ ಭವನದ ಕಟ್ಟಡಗಳಿಗೆ ದಿನಾಂಕ: 22.07.2008ಕ್ಕೆ ಪೂರ್ಣಗೊಳಿಸಲು ನಿಗದಿಪಡಿಸಲಾಗಿತ್ತು. ಆದರೆ ಹಲವು ಕಾರಣಗಳಿಂದಾಗಿ ಕಾಮಗಾರಿ ವಿಳಂಬವಾಗಿದ್ದು, ಗುತ್ತಿಗೆದಾರರಿಗೆ ದಂಡ ಸಹಿತ ಕಾಲಾವಧಿ ವಿಸ್ತರಿಸಿ ಮೇಲ್ಕಂಡ ಎಲ್ಲಾ ಕಾಮಗಾರಿಗಳನ್ನು 2010 ಜನವರಿ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

77 **ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ.ಲೇಔಟ್)** : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಸಂದಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಹಣಕಾಸಿನ ನೆರವು ಪಡೆದುಕೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನಮಾನ ದೊರೆತ ನಂತರ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಚನ್ನೈ ಉಚ್ಚ ನ್ಯಾಯಾಲಯದಲ್ಲಿ ವ್ಯಕ್ತಿಯೊಬ್ಬರು ಹೂಡಿರುವ ದಾವೆಯನ್ನು ಇತ್ಯರ್ಥಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;